ಪ್ರಶ್ನೆ

ಅ) ಮಂಡ್ಯ ನಗರ ಸಭೆಯಾಗಲೀ ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರವಾಗಲೀ ಅಥವಾ ಮಂಡ್ಯ ನಗರದಲ್ಲಿ ಅಭಿವೃದ್ಧಿ ತೆರಿಗೆ ವಸೂಲಿ ಮಾಡುವುದನ್ನು ಸರ್ಕಾರವು ತನ್ನ ಆದೇಶದ ಅನ್ವಯ ನಿರ್ಬಂಧಿಸಿದೆಯೆ;

ಆ) ಹಾಗಿದ್ದಲ್ಲಿ ಇದಕ್ಕೆ ಕಾರಣಗಳೇನು:

ಇ) ಅಭಿವೃದ್ಧಿ ತೆರಿಗೆ, ಪಾವತಿಸಿಕೊಳ್ಳದೇ ಇರುವುದರಿಂದ, ಮಂಡ್ಯದಲ್ಲಿ ಮನೆಕಟ್ಟುವವರಿಗೆ ಲೈಸನ್ಸ್ ದೊರಕದೇ, ಸಾರ್ವಜನಿಕರಿಗೆ ತೊಂದರೆಯಾಗುತ್ತಾ ಇರುವುದು, ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದಲ್ಲಿ ಸಾರ್ವಜನಿಕರ ತೊಂದರೆ ನಿವಾರಿಸಲು ಸರ್ಕಾರ ಕೈಗೊಳ್ಳುವ ಕ್ರಮಗಳೇನು?

ಉತ್ತರ

ಅ) ಹೌದು. ಮಂಡ್ಯ ನಗರಸಭೆಗೆ ಅನ್ವಯಿಸುವಂತೆ ಮಾತ್ರ.

ಆ) ನಗರ ಪ್ರದೇಶಗಳಿಗಾಗಿ ನಗರಾಭಿವೃದ್ಧಿ ಪ್ರಾಧಿಕಾರಗಳನ್ನು ರಚನೆ ಮಾಡುವ ಮೊದಲು ಕರ್ನಾಟಕ ಪುರಸಭೆಗಳ ಅಧಿನಿಯಮ 1964ರ ಭಾಐಐನೇ ಅಧ್ಯಾಯದ ಕಲಂ 170ರಡಿಯಲ್ಲಿ ಖಾಸಗಿ ಬಡಾವಣೆಗಳಿಗೆ ಮಂಜೂರಾತಿ ನೀಡುವ ಅಧಿಕಾರವನ್ನು ಪುರಸಭೆಗಳೇ ಹೊಂದಿದ್ದವು ಮತ್ತು ಅಭಿವೃದ್ಧಿ ಶುಲ್ಕವನ್ನು ವಸೂಲಿ ಮಾಡುತ್ತಿದ್ದವು. ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆಯು ಜಾರಿಗೆ ಬಂದ ನಂತರ ಸದರಿ ಕಾಯ್ದೆಯ ಕಲಂ 76(2)ರ ಸದ್ಗುಣದಡಿಯಲ್ಲಿ ಅಂತಹ ನಗರಸಭೆಗೆ ಅನ್ವಯಿಸುವುದಿಲ್ಲವೆಂದು ಅವಕಾಶ ಮಾಡಲಾಗಿರುತ್ತೆ.

ಇ ಮತ್ತು ಈ) ಸಾರ್ವಜನಿಕರಿಗೆ ಇದರಿಂದ ಆಗಿರುವ ಅನಾನುಕೂಲವನ್ನು ಬಗೆಹರಿಸಲು ಸಂಬಂಧಪಟ್ಟ ಅಧಿನಿಯಮಗಳಿಗೆ ತಿದ್ದುಪಡಿ ಮಾಡಲು ಸರ್ಕಾರ ಮುಂದಾಗಿದೆ.

ನಗರ ಹಾಗೂ ಗ್ರಾಮಗಳ ಅಭಿವೃದ್ಧಿಗೆ ಸಂವಿಧಾನ ತಿದ್ದುಪಡಿ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 90(209)

ಸದಸ್ಯರ ಹೆಸರು: ಶ್ರೀ ಪೂಜಾರ್ ಪಿ.ಹೆಚ್.(ಬಾಗಲಕೋಟೆ)

ಉತ್ತರಿಸುವ ಸಚಿವರು: ಶ್ರೀ ಎಂ.ಮಲ್ಲಿಕಾರ್ಜುನ ನಾಗಪ್ಪ(ಪೌರಾಡಳಿತ ರಾಜ್ಯ ಸಚಿವರು)

ಪ್ರಶ್ನೆ

ಅ) ರಾಜ್ಯದ ಎಲ್ಲಾ ನಗರಗಳು ಹಾಗೂ ಗ್ರಾಮಗಳ ಯೋಜನಾಬದ್ಧ ಅಭಿವೃದ್ಧಿಗೆ ಅನುಕೂಲವಾಗುವಂತೆ ಈಗಿರುವ ಸಂವಿಧಾನವನ್ನು ತಿದ್ದುಪಡಿ ಮಾಡುವ ಬಗ್ಗೆ ಕ್ರಮ ಕೈಗೊಳ್ಳಲಾಗುತ್ತಿದೆಯೇ?

ಆ) ಈ ಕುರಿತು ನೀತಿ ರೂಪಿಸಲು ಸಮಿತಿಯೊಂದನ್ನು ರಚಿಸಲಾಗಿದೆಯೇ? ಹಾಗಿದ್ದಲ್ಲಿ ಸಮಿತಿಯಲ್ಲಿನ ಸದಸ್ಯರು ಯಾರು? ಸಮಿತಿ ಬೇರೆ ಯಾವ ವಿಷಯಕ್ಕೆ ಸಂಬಂಧಪಟ್ಟಂತೆ ವರದಿ ನೀಡಲಿದೆ?

ಇ) ಈಗಾಗಲೇ ಸಮಿತಿಯು ತನ್ನ ವರದಿಯನ್ನು ನೀಡಿದೆಯೇ; ಹಾಗಿದ್ದಲ್ಲಿ ವರದಿಯಲ್ಲಿ ಪ್ರಸ್ತಾಪಿಸಲಾಗಿರುವ ಪ್ರಮುಖ ಅಂಶಗಳು ಯಾವುವು?

ಉತ್ತರ

ಅ) ಇಲ್ಲ

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಬೆಳಗಾಂ ನಗರದ ಅಭಿವೃದ್ಧಿ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 91(202)

ಸದಸ್ಯರ ಹೆಸರು: ಶ್ರೀ ಮನೋಹರ್ ಪುನ್ನಪ್ಪ ಕಾಡೋಲ್ಕರ್(ಉಚ್ಚಗಾಂವ್)

ಉತ್ತರಿಸುವ ಸಚಿವರು: ಶ್ರೀ ಬಿ.ಬಿ.ಚಿಮ್ಮನಕಟ್ಟಿ(ನಗರಾಭಿವೃದ್ಧಿ ಸಚಿವರು)

ಪ್ರಶ್ನೆ

1) ಬೆಳಗಾಂ ನಗರದ ಅಭಿವೃದ್ಧಿಗಾಗಿ ರೂ.100.00 ಕೋಟಿಗಳನ್ನು ಬಿಡುಗಡೆ